ಸಂಪಾದಕೀಯ

# ನಗರ ಜೀವನದ ಪಾಡು

ಇಲ್ಲಿಯ ತನಕ ಪ್ರಮುಖವಾಗಿ ಗ್ರಾಮೀಣ ಪರಿಸರದಲ್ಲಿ ಜೀವಿಸುತ್ತಿದ್ದ ಮಾನವ ಸ್ವೇಚ್ಛೆಯಿಂದಲೋ ಅಥವಾ ಸಮಾಜದ ನಾನಾ ಒತ್ತಡಗಳ ಪ್ರಭಾವದಿಂದಲೋ ನಗರಗಳತ್ತ ವಲಸೆ ಬರುತ್ತಿದ್ದಾನೆ. ಮುಂದಿನ ಕೆಲವೇ ವರ್ಷಗಳಲ್ಲಿ ಮಾನವನು ಪ್ರಧಾನವಾಗಿ ನಗರಗಳಲ್ಲಿ ವಾಸಿಸುತ್ತಾನೆ. ಅಂದರೆ, ಮಾನವ ಜನಾಂಗದ ಬಹುತೇಕ ಜನ ನಗರಗಳಲ್ಲಿ ಹಾಗೂ ಪಟ್ಟಣಗಳಲ್ಲಿ ವಾಸಿಸಲು ಪ್ರಾರಂಭಿಸುತ್ತಿದ್ದಾರೆ. ಇದರಿಂದ ಸಾಮಾಜಿಕ ಸ್ತರಗಳಲ್ಲಿ ಆಗುತ್ತಿರುವ ಗಮನಾರ್ಹ ಬದಲಾವಣೆಗಳು ಆತಂಕವನ್ನು ಉಂಟುಮಾಡುತ್ತಿದ್ದು ಗೊಂದಲಗಳಿಗೂ ಕಾರಣವಾಗುತ್ತಿವೆ.

೨೦೦೭ರ ಜಗತ್ತಿನ ಪರಿಸ್ಥಿತಿಯ ವರದಿಯಲ್ಲಿ ವಿಶ್ವಸಂಸ್ಥೆಯು ಈ ಕುರಿತಂತೆ ಸ್ಪಷ್ಟವಾದ ಮಾಹಿತಿಯನ್ನು ನೀಡಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನಗರಗಳಿಗೆ ಹಾಗೂ ಪಟ್ಟಣಗಳಿಗೆ ಪ್ರತಿವರ್ಷ ಸುಮಾರು ೬೦ ದಶಲಕ್ಷಕ್ಕೂ ಹೆಚ್ಚು ಜನ ಸೇರ್ಪಡೆಯಾಗುತ್ತಿದ್ದಾರೆ—ಅಂದರೆ ಇಡೀ ಇಂಗ್ಲೆಂಡಿನ ಜನಸಂಖ್ಯೆಯಷ್ಟು ಜನರು ಗ್ರಾಮಗಳಿಂದ ವಲಸೆ ಬರುತ್ತಾರೆ. ಇವರೆಲ್ಲ ಕಡಿಮೆ ವರಮಾನವುಳ್ಳ ಜನರ ಕೇರಿಗಳಲ್ಲಿ ವಾಸ ಮಾಡುತ್ತಾರೆ. ಅನಿಯಂತ್ರಿತ ವಲಸೆ ಹಾಗೂ ನಗರಗಳ ಅಡ್ಡಾದಿಡ್ಡಿ ಬೆಳವಣಿಗೆಯಿಂದ ಸಮಾಜದ ಆರೋಗ್ಯವನ್ನು ಕಾಪಾಡುವುದು ಕಠಿಣವಾಗಿ ಪರಿಸರದ ಗುಣಮಟ್ಟ, ಸಾಮಾಜಿಕ ಗುಣಮಟ್ಟ ಹಾಗೂ ಆರ್ಥಿಕ ಸುಭದ್ರತೆಗಳನ್ನು ಕಾಪಾಡುವುದೂ ದೊಡ್ಡ ಸಮಸ್ಯೆಯಾಗುತ್ತದೆ. ಬಹುತೇಕ ರಾಷ್ಟ್ರಗಳು ಈ ಸಮಸ್ಯೆಗಳನ್ನು ಎದುರಿಸುತ್ತಿವೆ. ಭಾರತವು ಇದಕ್ಕೆ ಹೊರತೇನಲ್ಲ.

ಸೋಜಿಗದ ಸಂಗತಿಯೆಂದರೆ ಬಡತನದ ಸಮಸ್ಯೆಗಳು ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಕೇಂದ್ರೀಕೃತಗೊಳ್ಳುತ್ತಿರುವುದನ್ನು ಸರ್ಕಾರಗಳಾಗಲಿ, ಸಮಾಜಸುಧಾರಕ ಸಂಸ್ಥೆಗಳಾಗಲಿ ಗಮನಿಸುತ್ತಿಲ್ಲ. ಗ್ರಾಮಗಳಲ್ಲೇ ಉಳಿಯಲು ಬಯಸುವ ಜನರು ಕೃಷಿ ಅಥವಾ ಮತ್ತಾವುದೋ ಕಸುಬನ್ನೋ ಜೀವನೋಪಾಯವಾಗಿಸಿಕೊಂಡು, ಇರುವಷ್ಟರಲ್ಲಿ ಸಂತುಷ್ಟರಾಗಿದ್ದುಕೊಂಡು, ಪರಸ್ಪರ ಸಹಕಾರದೊಂದಿಗೆ ಬದುಕುವ ಕಲೆಯನ್ನು ಕಲಿತಿರುತ್ತಾರೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಗ್ರಾಮೀಣ ಜನರಿಗಾಗಿ ಮೀಸಲಿರುವ ಯೋಜನೆಗಳನ್ನು ನಗರ ಪ್ರದೇಶಗಳಿಗೂ ಅನ್ವಯಿಸಬೇಕಾಗಿದೆ. ನಗರಗಳಲ್ಲಿನ ಬಡಜನರ, ನಿರುದ್ಯೋಗಿಗಳ ಬಗ್ಗೆ ಸರ್ಕಾರಗಳು, ಸಂಸ್ಥೆಗಳು ವಿಶೇಷ ಯೋಜನೆಗಳನ್ನು ರೂಪಿಸುವುದು ಅತ್ಯಾವಶ್ಯಕ. ಕೇವಲ ಮತಗಳನ್ನು ಒದಗಿಸುವ ಮೂಲಗಳಾಗಿ ಕೊಳೆಗೇರಿಗಳು ಹಾಗೂ ನಿರಾಶ್ರಿತರ ವಸತಿಗಳು ಅಸ್ತಿತ್ವ ಪಡೆದುಕೊಂಡಿರುವುದು ಅತ್ಯಂತ ಶೋಚನೀಯ ಸಂಗತಿ. ಒಂದು ಸಮಾಜವು ಅಭಿವೃದ್ಧಿಯನ್ನು ಹೊಂದಬೇಕಾದರೆ ಅಲ್ಲಿನ ಎಲ್ಲ ಸ್ತರಗಳಲ್ಲೂ ಅಭಿವೃದ್ಧಿಪರ ಚಟುವಟಿಕೆಗಳು ನಡೆಯಬೇಕು. ಬದಲಾವಣೆಯ ಸುಧಾರಣೆಯ ಗಾಳಿ ಕೆಳಗಿನ ಸ್ತರಗಳಿಗೆ ತಲುಪದಿದ್ದರೆ ಸಮಾಜ ಅಸ್ಥಿರಗೊಂಡು, ಅಸಮಾಧಾನ ಹಾಗೂ ಪ್ರತಿಭಟನೆಗಳಿಗೆ ನಾಂದಿಯಾಗುತ್ತದೆ.

ಒಂದು ರಾಷ್ಟ್ರದ ಅಭಿವೃದ್ಧಿಯನ್ನು ಅದರಲ್ಲಿನ ನಗರಗಳ ಸಂಖ್ಯೆಯಿಂದಲೂ ಅಳೆಯಲಾಗುತ್ತದೆ. ಉದ್ಯೋಗ ಸೌಲಭ್ಯಗಳು, ಒಳ್ಳೆಯ ಮಾರುಕಟ್ಟೆ ಉತ್ತಮ ಶಿಕ್ಷಣದ ವ್ಯವಸ್ಥೆ, ಮೂಲಭೂತ ಸೌಕರ್ಯಗಳು, ಆಧುನಿಕ ಜೀವನಶೈಲಿ, ಕೈಗಾರಿಕೆಗಳ ಬೆಳವಣಿಗೆ ಮುಂತಾದ ಆಕರ್ಷಣೆಗಳಿಂದ ಗ್ರಾಮೀಣ ಜನರು ನಗರಗಳಿಗೆ ವಲಸೆ ಬರುತ್ತಾರೆ. ತಮ್ಮ ಮನೆತನದ ಉದ್ಯೋಗಗಳಾದ ಕೃಷಿ, ಹೈನುಗಾರಿಕೆ, ಸಣ್ಣ ಕೈಗಾರಿಕೆಗಳ ಉತ್ಪಾದನೆ, ಇತ್ಯಾದಿಗಳನ್ನು ತ್ಯಜಿಸಿ ನಗರಜೀವನದ ಆಮಿಷಕ್ಕೆ ಬಲಿಯಾಗುತ್ತಾರೆ. ದುಬಾರಿ ಜೀವನಶೈಲಿ ಹಾಗೂ ಜನಸಂದಣಿಯಿಂದ ಸ್ವಾಭಾವಿಕವಾಗಿ ಉಂಟಾಗುವ ಪೈಪೋಟಿಯಲ್ಲಿ ಸಿಕ್ಕಿಹಾಕಿಕೊಂಡು ಇವರು ಅಸಹಾಯಕ ಜೀವನವನ್ನು ನಡೆಸುತ್ತಾರೆ. ಚೀನಾ, ಬ್ರೆಜಿಲ್, ಜಪಾನ್, ಅಮೆರಿಕ, ಭಾರತ ಹಾಗೂ ಇನ್ನಿತರ ರಾಷ್ಟ್ರಗಳಲ್ಲಿನ ಪ್ರತಿಯೊಂದು ದೊಡ್ಡ ನಗರದಲ್ಲಿಯೂ ೧೦ ದಶಲಕ್ಷಕ್ಕೂ ಮೀರಿದ ಜನಸಂಖ್ಯೆ ಇದೆಯಂತೆ. ಆದರೆ ಪ್ರಪಂಚದ ಜನಸಂಖ್ಯೆಯ ಶೇ.೫ರಷ್ಟು ಮಾತ್ರ ಇರುವ ಈ ನಗರವಾಸಿಗಳು ಹೊಸ ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದಾರೆ ಹಾಗೂ ತಾವೂ ಅವುಗಳಿಗೆ ಬಲಿಯಾಗುತ್ತಿದ್ದಾರೆ.

ನಗರಗಳ ಸಂಖ್ಯೆ ಹೆಚ್ಚಿದಷ್ಟೂ ಜನರ ಜೀವನಮಟ್ಟದಲ್ಲಿ ಸುಧಾರಣೆಗಳು ಆಗುತ್ತವೆ ಎಂಬುದು ಎಲ್ಲರ ನಂಬಿಕೆ. ವೈದ್ಯಕೀಯ ಸೌಲಭ್ಯಗಳು ನಗರಗಳಲ್ಲಿ ಸುಲಭವಾಗಿ ದೊರೆಯುವುದರಿಂದ ಅಲ್ಲಿನ ಜನ ಹೆಚ್ಚು ಕಾಲ ಜೀವಿಸುವ ಸಾಮರ್ಥ್ಯವನ್ನು ಗಳಿಸುತ್ತಾರೆ. ಇದರೊಂದಿಗೆ ನಗರಗಳಲ್ಲಿ ಶಿಕ್ಷಣದ ಗುಣಮಟ್ಟವೂ ಅಧಿಕವಾಗಿರುತ್ತದೆ. ಹಾಗೂ ಜನಸಾಮಾನ್ಯ ಜೀವನಕ್ಕೆ ಅತ್ಯವಶ್ಯಕವಾದ ರಕ್ಷಣೆ ಹಾಗೂ ಸ್ವಾತಂತ್ರ್ಯವೂ ನಗರವಾಸಿಗಳಿಗೆ ದೊರೆಯುತ್ತವೆ. ಸಾಂಸ್ಕೃತಿಕ ಹಾಗೂ ರಾಜಕೀಯ ಕೇಂದ್ರಗಳಾಗಿ ಪರಿಣಮಿಸುವ ನಗರಗಳು ಭೋಗ ಜೀವನದ ಪ್ರತೀಕಗಳಾಗಿಯೂ ಕೂಡ ಜನರನ್ನು ತಮ್ಮತ್ತ ಸೆಳೆಯುತ್ತವೆ.

ಈ ಮೇಲಿನ ಅನುಕೂಲಗಳನ್ನು ಕಂಡು ನಗರಗಳ

ಸ್ವರ್ಗಗಳೆಂದು ಭಾವಿಸುವುದು ಮೂಢತನ. ನಗರಗಳು ಅಸಮಾನತೆಯ ಕೇಂದ್ರಗಳೂ ಕೂಡ. ದೊಡ್ಡ ದೊಡ್ಡ ವಸತಿ ಘಟಕಗಳ ಬಳಿಯಲ್ಲಿಯೇ ಕಂಡುಬರುವ ಕೊಳೆಗೇರಿಗಳು, ಗುಡಿಸಿಲುಗಳು ಇದಕ್ಕೆ ಸಾಕ್ಷಿ. ಒಂದು ವರದಿಯ ಪ್ರಕಾರ ಸುಮಾರು ೬೦೦ ದಶಲಕ್ಷ ನಗರ ನಿವಾಸಿಗಳು, ಅಂದರೆ ಭೂಮಂಡಲದ ಜನಸಂಖ್ಯೆಯ ಶೇಕಡ ಆರರಷ್ಟು ಜನ, ಸೂರಿನ ರಕ್ಷಣೆಯಿಲ್ಲದೆ ಕಿಕ್ಕಿರಿದ ಒಂದು ಕೊಠಡಿಯಂಥ ಗೂಡುಗಳಲ್ಲಿ ಅಥವಾ ಗುಡಿಸಿಲುಗಳಲ್ಲಿ ವಾಸಿಸುತ್ತಾರೆ. ಉಸಿರು ಗಟ್ಟಿಸುವ ವಾತಾವರಣದಲ್ಲಿ ಮೂರು ನಾಲ್ಕು ಜನ ವಾಸಮಾಡುವುದರಿಂದ ಸಾಮಾನ್ಯ ಮಟ್ಟದ ಜೀವನದ ಆವಶ್ಯಕತೆಗಳಾದ ನೀರು, ಶೌಚಾಲಯಗಳಂತಹ ಸೌಲಭ್ಯಗಳು ಇರುವುದಿಲ್ಲ. ನಿಶ್ಚಿತವಾದ ನಿವಾಸವೂ ಇರುವುದಿಲ್ಲವಾದ್ದರಿಂದ ಇವರು ಮತವನ್ನೂ ಚಲಾಯಿಸಲಾರರು. ರಾಜಕಾರಣಿಗಳ, ಹಿಡುವಳಿದಾರರ, ಪೊಲೀಸರ ಹಾಗೂ ಅಪರಾಧಿಗಳ ಕೈಗೊಂಬೆಗಳಾಗಿ ಇವರು ಯಮಯಾತನೆಯನ್ನು ಅನುಭವಿಸುತ್ತಾರೆ. ದೊಡ್ಡ ದೊಡ್ಡ ನಿಗಮಗಳು, ಭ್ರಷ್ಟ ರಾಜಕಾರಣಿಗಳು, ಸ್ಥಿರಾಸ್ತಿಗಳ ಮಾಲೀಕರು ಹಾಗೂ ನೌಕರರ ಹಿತಾಸಕ್ತಿಗಳನ್ನು ಕಾಪಾಡುವ ನೆಪದಲ್ಲಿ ತಮ್ಮ ಸ್ವಾರ್ಥವನ್ನೇ ಸಾಧಿಸುವ ಪಟ್ಟಭದ್ರ ಹಿತಾಸಕ್ತಿಗಳು ಇವರ ಕಷ್ಟಗಳನ್ನು ನೀಗಿಸಲು ಹಮ್ಮಿಕೊಳ್ಳುವ ಅನೇಕ ಸುಧಾರಣೆಗಳನ್ನು ಯಶಸ್ವಿಯಾಗಿ ತಡೆಗಟ್ಟುತ್ತಾರೆ. ಇವರುಗಳ ದೃಷ್ಟಿಯಲ್ಲಿ ಈ ಸಮಾಜಸುಧಾರಣೆಯ ಕಾರ್ಯಗಳು ಹಣ ಗಳಿಸುವ ಮಾಧ್ಯಮಗಳು. ಇವರ ಪಾಡನ್ನು ಪ್ರಚಾರ ಮಾಡುವುದರ ಮೂಲಕ ನೂರಾರು ಕೋಟಿಗಳ ಪ್ರಾಜೆಕ್ಟುಗಳಿಗಾಗಿ ಹಲವಾರು ಸಂಸ್ಥೆಗಳಿಂದ ಹಣವನ್ನು ಸಂಗ್ರಹಿಸಿ ತಮ್ಮ ಜೇಬಿಗೆ ಇಳಿಸಿಕೊಳ್ಳುತ್ತಾರೆ. ಶಿಕ್ಷಣದ ಬೆಳಕು ಇವರ ಜೀವನಗಳನ್ನು ಬೆಳಗದಂತೆ ಎಚ್ಚರ ವಹಿಸುವ ಈ ವಂಚಕರು ಸೇವಾಸಂಸ್ಥೆಗಳನ್ನು ಕೂಡ ಇವರಿಂದ ದೂರ ಇರಿಸುತ್ತಾರೆ. ಅಪನಂಬಿಕೆ ಹಾಗೂ ದ್ವೇಷಗಳನ್ನು ಮತ್ತೆ ಮತ್ತೆ ಹೇಳಿಕೊಟ್ಟು ಇವರ ಮನಸ್ಸಿನಲ್ಲಿ ಅಸಮಾಧಾನ, ಬಂಡಾಯಗಳ ದಳ್ಳುರಿಯನ್ನು ಬಿತ್ತುತ್ತಾರೆ.

ಇದಕ್ಕೆಲ್ಲ ಪರಿಹಾರವಿದೆಯೇ ಎಂಬ ಪ್ರಶ್ನೆ ಕೆಲವು ಓದುಗರನ್ನಾದರೂ ಕಾಡಿರಬಹುದು. ಇತರರ ಕಷ್ಟ ದುಃಖಗಳಿಗೆ ಸ್ಪಂದಿಸುವ ಹೃದಯವುಳ್ಳವರಿಗೆ ಈಗಾಗಲೇ ಪರಿಹಾರಗಳೂ ತಿಳಿದಿರಬಹುದು. ಮೊಟ್ಟಮೊದಲನೆಯದಾಗಿ ಸ್ಥಳೀಯ ಜನರು ಒಂದಾಗಿ ತಮ್ಮ ಜೀವನವನ್ನು ಸುಧಾರಿಸಿಕೊಳ್ಳಲು ಅಗತ್ಯವಾದ ಯೋಜನೆಗಳನ್ನು ದಿಟ್ಟತನದಿಂದ ಹಮ್ಮಿಕೊಳ್ಳಬೇಕು. ಸರ್ಕಾರೇತರ ಸ್ವಯಂಸೇವಕ ಸಂಸ್ಥೆಗಳಿಂದ ಮಾತ್ರ ಸಹಾಯವನ್ನು ಕೋರಿ, ಮತ ಹಾಗೂ ಕೋಮುಗಳ ಭೇದವನ್ನು ಸೃಷ್ಟಿಸುವ ರಾಜಕಾರಣಿಗಳಿಂದ ದೂರ ಸರಿಯಬೇಕು. ಶಿಕ್ಷಣದ ಸೌಲಭ್ಯಗಳು ತಮ್ಮ ಕೇರಿಯ ಮಕ್ಕಳಿಗೆ ಸರಿಯಾಗಿ ದೊರೆಯುವತ್ತ ಗಮನ ಹರಿಸಿದರೆ ಸಾಕು, ಅನೇಕ ಸಮಸ್ಯೆಗಳನ್ನು ಬಗೆಹರಿಸಬಹುದು. ಇಂತಹ ಅನೇಕ ಸುಧಾರಣೆಗಳನ್ನು ಏಷ್ಯಾ ಹಾಗೂ ಆಫ್ರಿಕಾ ಖಂಡಗಳ ಕೊಳೆಗೇರಿ ನಿವಾಸಿಗಳ ಒಕ್ಕೂಟಗಳು ಸಾಧಿಸಿ ತೋರಿಸಿವೆ. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಸ್ವಚ್ಛ ಹಾಗೂ ಆರೋಗ್ಯಕರ ಪರಿಸರವನ್ನು ನಿರ್ಮಾಣ ಮಾಡುವತ್ತ ಈ ಸಂಸ್ಥೆಗಳು ಕೆಲಸ ಮಾಡಬೇಕಾಗಿದೆ.

ಬಡತನದ ಕಷ್ಟಗಳನ್ನು ಅರ್ಥಮಾಡಿಕೊಳ್ಳಬಲ್ಲವರು ಎಲ್ಲೋ ಕೆಲವು ನಿಸ್ವಾರ್ಥಿಗಳು ಮಾತ್ರ. ಎಲ್ಲರಿಂದಲೂ ತಿರಸ್ಕಾರವನ್ನೇ ಅನುಭವಿಸುವ ಬಡವನ ಜೀವನ ದುಃಖಮಯ, ಶೋಚನೀಯ. 'ಮೃಚ್ಛಕಟಿಕ' ದಲ್ಲಿ (೧-೧೪) ಕವಿಯು ಬಡತನದ ವರ್ಣನೆಯನ್ನು ಅತ್ಯಂತ ಮಾರ್ಮಿಕವಾಗಿ ಮಾಡಿದ್ದಾನೆ:

ದಾರಿದ್ರ್ಯಾದ್ಧ್ರಿಯಮೇತಿ ಹ್ರೀಪರಿಗತಃ ಪ್ರಭ್ರಶ್ಯತೇ ತೇಜಸಃ ।
ನಿಸ್ತೇಜಾಃ ಪರಿಭೂಯತೇ ಪರಿಭವಾನ್ನಿರ್ವೇದಮಾಪದ್ಯತೇ ॥
ನಿರ್ವಿಣ್ಣಃ ಶುಚಮೇತಿ ಶೋಕಪಿಹಿತೋ ಬುದ್ಧ್ಯಾ ಪರಿತ್ಯಜ್ಯತೇ
ನಿರ್ಬುದ್ಧಿಃ ಕ್ಷಯಮೇತ್ಯಹೋ ನಿಧನತಾ ಸರ್ವಾಪದಾಮಾಸ್ಪದಮ್॥

"ಬಡತನದಿಂದ ನಾಚಿಕೆಯುಂಟಾಗಿ, ವ್ಯಕ್ತಿಯು ಅದರಿಂದ ಎದೆಗೆಡುತ್ತಾನೆ. ಅದರಿಂದ ಅಪಮಾನವನ್ನು ಅನುಭವಿಸಿ, ಅಪಮಾನದಿಂದ ಯಾವ ಕೆಲಸವನ್ನೂ ಮಾಡಲಾಗದ ಬೇಸರವುಂಟಾಗಿ, ಬೇಸರಿಕೆಯಿಂದ ದುಃಖವುಂಟಾಗುತ್ತದೆ. ದುಃಖದಿಂದ ಯೋಚನೆ ಮಾಡುವ ಸಾಮರ್ಥ್ಯ ಅವನಲ್ಲಿ ಕುಂದುತ್ತದೆ. ಇದರಿಂದ ಹಾಳಾಗುತ್ತಾನೆ. ಆದ್ದರಿಂದ ಬಡತನವು ಎಲ್ಲಾ ಬಗೆಯ ಕಷ್ಟಗಳಿಗೂ ಮೂಲ."

ಸ್ವಾಮಿ ವಿವೇಕಾನಂದರು ಸಮಾಜದ ಈ ಅಸಮತೋಲನ ವ್ಯವಸ್ಥೆಯನ್ನು ಕಂಡು ಮರುಗಿದರು. "ಹಸಿದ ಹೊಟ್ಟೆಗೆ ಮೊದಲು ಅನ್ನ ದೊರೆಯಬೇಕು. ಅನಂತರ ಧರ್ಮ" ಎನ್ನುವ ಸ್ವಾಮಿಜಿಯ ನೇರ ನುಡಿ ಜಗತ್ಪ್ರಸಿದ್ಧ. ಶಿಕ್ಷಣದಿಂದ ಈ ಎಲ್ಲ ಪಿಡುಗುಗಳನ್ನೂ ಹೋಗಲಾಡಿಸಬಹುದು ಎಂದಿರುವ ಸ್ವಾಮಿಜಿ ಹೇಳುತ್ತಾರೆ: "ವ್ಯಕ್ತಿಯಲ್ಲಿರುವ ಶಕ್ತಿಯನ್ನು ಬೆಳೆಸುವ, ಇಚ್ಛಾಶಕ್ತಿಯನ್ನು ಸರಿಯಾದ ಮತ್ತು ಸಮರ್ಥವಾದ ರೀತಿಯಲ್ಲಿ ಬೆಳೆಸಿ ಸ್ವಾವಲಂಬಿಗಳಾಗುವಂತೆ, ಶುದ್ಧ ಚಾರಿತ್ರ್ಯವುಳ್ಳವರಾಗುವಂತೆ ಮಾಡುವ ತರಬೇತಿಯೇ ನಿಜವಾದ ಶಿಕ್ಷಣ."

ಶಿಕ್ಷಣದ ವ್ಯವಸ್ಥೆಯೊಂದಿಗೆ ಮಾನವ ನಿರ್ಮಾಣದ ಕೆಲಸ ಆಗಬೇಕಾಗಿದೆ. ಶಿಕ್ಷಿತ ವರ್ಗದವರೇ ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡು ಬಡವರನ್ನು, ದೀನರನ್ನು ದೋಚುತ್ತಿರುವುದು ಹೊಸ ವಿಚಾರವಲ್ಲ. ಪ್ರಜ್ಞಾವಂತ ಮಾನವನ ಆವಶ್ಯಕತೆಯನ್ನು ಎಲ್ಲ ದೇಶಗಳೂ ಕಂಡುಕೊಂಡಿವೆ. ಕಾನೂನಿರಬಹುದು,

ಉತ್ತಮ ವ್ಯವಸ್ಥೆಗಳಿರಬಹುದು, ಆದರೆ ಸ್ವಾರ್ಥಕ್ಕಾಗಿ ಎಲ್ಲವನ್ನೂ ದುರುಪಯೋಗ ಪಡಿಸಿಕೊಳ್ಳುವ ಜನರೇ ಅಧಿಕವಾಗಿ ಇದ್ದರೆ, ಆ ಸಮಾಜಕ್ಕೆ ಉಳಿಗಾಲವಿಲ್ಲ. ಪ್ರಸಿದ್ಧವಾದ ಒಂದು ಸುಭಾಷಿತ ಹೇಳುತ್ತದೆ:

ಯೇ ಕೇಚಿತ್ ದುಃಖಿತಾ ಲೋಕೇ
ಸರ್ವೇತೇ ಸ್ವಸುಖೇಚ್ಛಯಾ।
ಯೇ ಕೇಚಿತ್ ಸುಖಿತಾ ಲೋಕೇ
ಸರ್ವೇತೇಽನ್ಯಸುಖೇಚ್ಛಯಾ॥

"ಈ ಲೋಕದಲ್ಲಿ ದುಃಖಿಗಳು ಕೆಲವರಿದ್ದಾರೆ. ಅವರೆಲ್ಲರೂ ಎಂದೂ ಪೂರೈಸಲಾರದ ತಮ್ಮ ವೈಯಕ್ತಿಕ ಸುಖದ ಬಯಕೆಗಳಿಂದ ಹಾಗಿರುತ್ತಾರೆ. ಇನ್ನು ಕೆಲವರು ಸುಖಿಗಳು ಲೋಕದಲ್ಲಿ ಕಂಡುಬರುತ್ತಾರೆ. ಅವರು ಇತರರ ಸುಖಕ್ಕಾಗಿ ತಮ್ಮೆಲ್ಲ ಪ್ರಯತ್ನಗಳನ್ನೂ ಮಾಡುತ್ತಿರುತ್ತಾರೆ."

ಎರಡನೆಯ ಪಂಗಡಕ್ಕೆ ಸೇರಿದವರು ಹೆಚ್ಚಿರುವ ಸಮಾಜ ಎಲ್ಲ ಎಡರುತೊಡರುಗಳನ್ನೂ ದಾಟಿ ಉತ್ತುಂಗಕ್ಕೆ ಏರುತ್ತದೆ. ಸಾಮರಸ್ಯದ ಬಾಳುವೆ ಎಲ್ಲರಿಗೂ ಸಾಧ್ಯವಾಗಬೇಕಾದರೆ, ಸರ್ವೋದಯವಾಗಬೇಕಾದರೆ ತಮ್ಮ ಹಿತಕ್ಕಾಗಿ ಪರರನ್ನು ದೋಚದ ನಿಸ್ವಾರ್ಥ ವ್ಯಕ್ತಿಗಳ ಆವಶ್ಯಕತೆಯಿದೆ. ಸರ್ಕಾರಗಳು ನಾನಾ ಯೋಜನೆಗಳ ಮೂಲಕ ಅಭಿವೃದ್ಧಿಯನ್ನು ತರಲು ಪ್ರಯತ್ನಿಸುತ್ತಿದ್ದರೂ ಹಣ ಮತ್ತು ವಸ್ತುಗಳು ಸಮಾಜದ ಕೆಳಗಿನ ಸ್ತರಗಳಿಗೆ ತಲುಪುವುದೇ ಇಲ್ಲ. ಭ್ರಷ್ಟಾಚಾರ ಹಾಗೂ ಅನೈತಿಕತೆಗಳು ನಮ್ಮ ಜನರಲ್ಲಿ ತಾಂಡವವಾಡುತ್ತಿದ್ದರೆ ಯಾವ ಸುಧಾರಣೆಯೂ ಸಾಧ್ಯವಿಲ್ಲ. ಮೌಲ್ಯಗಳ ಶಿಕ್ಷಣದಿಂದ ಸಾಮಾಜಿಕ ಕ್ರಾಂತಿಯನ್ನೇ ಸಾಧಿಸಬೇಕಾಗಿದೆ.

ಇಂಥ ಬದಲಾವಣೆಯ ನಿಟ್ಟಿನಲ್ಲಿ ಪತ್ರಿಕಾ ಮಾಧ್ಯಮಗಳ ಪಾತ್ರ ಬಹಳ ಮಹತ್ತರವಾದುದು. ಉತ್ತಮ ವ್ಯಕ್ತಿಗಳ, ಸಂಸ್ಥೆಗಳ ಪರಿಚಯದೊಂದಿಗೆ ಜನಮಾನಸದಲ್ಲಿ ಭರವಸೆ ಹಾಗೂ ಸಾಧಿಸುವ ಛಲವನ್ನು ಇವರು ಬೆಳೆಸಲು ಪ್ರಯತ್ನಿಸಬೇಕು. ಸಮಾಜದಲ್ಲಿರುವ ದೋಷಗಳ, ಕೊಳಕಿನ ಚಿತ್ರಣವನ್ನೇ ನೀಡುವುದರಿಂದ ಏನು ಪ್ರಯೋಜನ? ಮಾಧ್ಯಮಗಳು ಸಕ್ರಿಯವಾಗಿ ಸಕಾರಾತ್ಮಕ ಭಾವನೆಗಳನ್ನೇ ಪ್ರಚಾರ ಮಾಡಬೇಕೆಂದು ಎಲ್ಲ ವಿಚಾರವಂತರೂ ಅಭಿಪ್ರಾಯ ಪಟ್ಟಿದ್ದಾರೆ. ಜನರ ಚಿಂತನೆಯನ್ನು ರೂಪಿಸುವ ಮಾಧ್ಯಮಗಳು ತಮ್ಮ ಈ ಗುರುತರ ಜವಾಬ್ದಾರಿಯನ್ನು ಆದಷ್ಟು ಬೇಗ ಅರಿತುಕೊಳ್ಳುವುದು ಉತ್ತಮ. ಕೇವಲ ನಗರಗಳಲ್ಲಿನ ರಂಗುರಂಗಿನ ಬದುಕನ್ನು ಆಕರ್ಷಕವಾಗಿ ಪ್ರದರ್ಶಿಸಿ, ಗ್ರಾಮೀಣ ಜನರಲ್ಲಿ ನಿರುತ್ಸಾಹ, ಖಿನ್ನತೆಗಳನ್ನು ಹಾಗೂ ಅಂತರವನ್ನು ಸೃಷ್ಟಿಸದೆ ಸಂಸ್ಕೃತಿ, ಸಜ್ಜನಿಕೆಯ ಬೀಡಾಗಿರುವ ನಮ್ಮ ಹಳ್ಳಿಗರ ಉತ್ತಮ ಸಾಧನೆಗಳನ್ನು ವರದಿ ಮಾಡಬೇಕು. ಹೀಗಾದಾಗ ಮಾತ್ರ ನಗರ ಮತ್ತು ಹಳ್ಳಿ ಎಂಬ ವ್ಯತ್ಯಾಸ ತೊಲಗಿ ಮಾನವನು ತನ್ನ ವಾಸಕ್ಷೇತ್ರ ಹಾಗೂ ಕಾರ್ಯಕ್ಷೇತ್ರಗಳಲ್ಲಿ ಅಸಾಮಾನ್ಯತೆಯನ್ನು ಸಾಧಿಸಬಲ್ಲವನಾಗುತ್ತಾನೆ. ತಂತ್ರಜ್ಞಾನದ ಬಳಕೆಯನ್ನು ಗ್ರಾಮೀಣ ಪ್ರದೇಶಗಳಿಗೂ ತೆಗೆದುಕೊಂಡು ಹೋಗುವ ಮೂಲಕ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಂಡು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಬಹುದು. ಇಂತಹ ಬದಲಾವಣೆಗಳನ್ನು ಕಾಣುವ ಸುದಿನ ಬೇಗ ಮೂಡಲಿ ಎಂದು ಆಶಿಸೋಣ.

## ಪ್ರಜಾಸತ್ತಾತ್ಮಕ ದೃಷ್ಟಿಕೋನ

ಎಲ್ಲೆಲ್ಲಿಯೂ ಅಸಡ್ಡೆಯ ಮನೋಭಾವ, ಮೊಂಡುತನವೇ ಇದೆ. ಅದರ ಜೊತೆಗೆ ಬಹು ಬೇಡಿಕೆಗಳ ಒತ್ತಾಯ ಸೇರಿಕೊಂಡಿದೆ. ಪ್ರತಿಯೊಂದು ಬೇಡಿಕೆ ಈಡೇರಿದ ಮೇಲೆ ಹೊಸ ಹೊಸ ಬೇಡಿಕೆಗಳ ಧಾರಾಕಾರ ಮಳೆ ಮುಂದುವರಿಯುತ್ತದೆ. ಆದರೆ ಉತ್ಪಾದನೆಯಲ್ಲಿ ಯಾವ ಗಣನೀಯ ಸುಧಾರಣೆಯೂ ಕಂಡುಬರುವುದಿಲ್ಲ. ಇಂಥ ಸನ್ನಿವೇಶದಲ್ಲಿ, ಅತ್ಯಂತ ದುರ್ದೈವದ ಸಂಗತಿ ಎಂದರೆ ರಾಷ್ಟ್ರೀಯ ರಾಜಕಾರಣದ ಶೋಚನೀಯ ಪಾತ್ರ. ಹರಿಜನರ, ಇತರ ದುರ್ಬಲರ ಸಾಮೂಹಿಕ ಹತ್ಯೆಯಂತಹ ಅಧಿಕವಾಗುತ್ತಿರುವ ಅಮಾನುಷ ಘಟನೆಗಳು ಹೆಚ್ಚುತ್ತಿದ್ದರೂ ಕನಿಷ್ಠ ಮಟ್ಟದ ರಾಷ್ಟ್ರೀಯ ಪ್ರಜ್ಞೆ ಬಾರದಿರುವುದು ಅತ್ಯಂತ ದುರದೃಷ್ಟಕರ. ಕೆಲವು ದುರದೃಷ್ಟಕರ ಮತೀಯ/ಜಾತೀಯ ಇಲ್ಲವೆ ಸಾಮಾಜಿಕ-ರಾಜಕೀಯ ಸನ್ನಿವೇಶಗಳಲ್ಲೂ ಪಕ್ಷಗಳ ಅನುಕೂಲಕ್ಕಾಗಿ ರಾಜಕೀಯ ದುರ್ಲಾಭ ಪಡೆಯುವುದನ್ನು ಬಿಟ್ಟು ಸಮಸ್ಯೆಯನ್ನು ಒಂದು ಮಾನವೀಯ ಮತ್ತು ಪ್ರಜಾ ಸತ್ತಾತ್ಮಕ ದೃಷ್ಟಿಕೋನದಿಂದ ಎದುರಿಸಬೇಕೆಂಬ ಉನ್ನತ ಮಟ್ಟದಿಂದ ವರ್ತಿಸಬೇಕು.

—ಸ್ವಾಮಿ ರಂಗನಾಥಾನಂದ

### ಪ್ರೀತಿಯ ಓದುಗರಿಗೆ

ನಿಮ್ಮಲ್ಲಿ ನಮ್ಮದೊಂದು ಮನವಿ ಇದೆ.

ಈ ನಿಮ್ಮ ಅಚ್ಚುಮೆಚ್ಚಿನ ಪತ್ರಿಕೆಯ ಚಂದಾ ವಲಯವನ್ನು ಹೆಚ್ಚಿಸಲು ನಿಮ್ಮ ಸಹಕಾರದ ಅಗತ್ಯವಿದೆ. ಮಾರ್ಚ್ ತಿಂಗಳಲ್ಲೇ ನಮ್ಮ ಎಲ್ಲಾ ಚಂದಾದಾರರೂ ತಮ್ಮ ಪರಿಚಯದ ಒಬ್ಬರನ್ನಾದರೂ ಪತ್ರಿಕೆಗೆ ಮೂರು ವರ್ಷಗಳ ಚಂದಾದಾರನ್ನಾಗಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ. ಹೆಚ್ಚು ಚಂದಾದಾರನ್ನಾಗಿಸಿದರೆ ಅಭ್ಯಂತರವಿಲ್ಲ ಎಂದು ವಿಶೇಷವಾಗಿ ಹೇಳಬೇಕೆ?

-ಸಂಪಾದಕರು